ಗುಂಡಾ ಮತ್ತು ಜವಳಗೇರಾ ಗ್ರಾಮಗಳಲ್ಲಿ ವಿದ್ಯುತ್ ಉಪಕೇಂದ್ರ ತೆರೆಯುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 189 (298)
ಸದಸ್ಯರ ಹೆಸರು : ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)
ಉತ್ತರಿಸುವ ಸಚಿವರು : ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು)

ಪ್ರಶ್ನೆಗಳು:–

ಅ) ಸಿಂಧನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಂಡಾ ಮತ್ತು ಜವಳಗೇರಾ ಗ್ರಾಮಗಳಲ್ಲಿ ವಿದ್ಯುತ್ ಉಪ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಉಪ ಕೇಂದ್ರವನ್ನು ತೆರೆಯಲು ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ?

ಇ) ಹಾಗಿದ್ದಲ್ಲಿ, ಎಷ್ಟು ಎಕರೆ ಭೂಮಿಯನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ?

ಈ) ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ರೈತರಿಗೆ ಸರ್ಕಾರ ಪರಿಹಾರ ಧನವನ್ನು ನೀಡಿದೆಯೇ?

ಉ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಪರಿಹಾರ ಧನ ನೀಡಲಾಗಿದೆ (ವಿವರಗಳನ್ನು ನೀಡುವುದು)

ಉತ್ತರಗಳು:–

ಅ) ಸಿಂಧನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗುಂಡಾ ಮತ್ತು ಜವಳಗೇರಾ ಗ್ರಾಮಗಳಲ್ಲಿ 33/11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆ ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ಮುಂದಿರುತ್ತದೆ.

ಆ) ಈ ಉಪ ಕೇಂದ್ರಗಳನ್ನು ಸ್ಥಾಪಿಸಲು ಅಗತ್ಯವಿರುವ ಭೂಮಿಯನ್ನು

ಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ.

ಇ) ಗುಂಡಾ ಮತ್ತು ಜವಳಗೇರಾ ಗ್ರಾಮಗಳಲ್ಲಿ ತಲಾ ಎರಡು ಎಕರೆ ಜಮೀನನ್ನು ಖರೀದಿಸಿ ಸ್ವಾಧೀನಪಡಿಸಿ ಕೊಳ್ಳಲಾಗಿರುತ್ತದೆ.

ಈ) ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ರೈತರಿಗೆ ಪರಿಹಾರ

ಉ) ಧನವನ್ನು ನೀಡಲಾಗಿದ್ದು, ವಿವರಗಳು ಕೆಳಕಂಡಂತಿವೆ;

1. ಗುಂಡಾ: ಸರ್ವೆ ನಂ. 110 ರಲ್ಲಿ 2 ಎಕರೆ ಭೂಮಿಯನ್ನು ಶ್ರೀಮತಿ ಜಯಮ್ಮ ಕೋಂ ರಾಜೆಂದ್ರ ರವರಿಂದ ರೂ. 3,46.000– ಗಳನ್ನು ಪಾವತಿಸಲಾಗಿದೆ.
2. ಜವಳಗೇರಾ: ಸರ್ವೆ ನಂ. 93/2 ರಲ್ಲಿ ಎರಡು ಎಕರೆ ಭೂಮಿಯನ್ನು ಶ್ರೀಮತಿ ಮಲ್ಲಮ್ಮ ಕೋಂ ಹೊನಲ್‌ಗೌಡ ರವರಿಂದ ರೂ. 3,20,000/– ಗಳನ್ನು ಪಾವತಿಸಲಾಗಿದೆ.

ಸಿಂಧನೂರಿಗೆ ಹೊಸ ಸಂಚಾರಿ ಆರಕ್ಷಕ ಠಾಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 190 (299)

ಸದಸ್ಯರ ಹೆಸರು : ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)

ಉತ್ತರಿಸುವ ಸಚಿವರು : ಶ್ರೀ. ಆರ್. ಅಶೋಕ್ (ಗೃಹ ಮತ್ತು ಸಾರಿಗೆ ಸಚಿವರು)

ಪ್ರಶ್ನೆಗಳು:–

ಅ) ಸಿಂಧನೂರು ನಗರಕ್ಕೆ ಹೊಸ ಸಂಚಾರಿ ಪೊಲೀಸ್ ಠಾಣೆಗೆ ಮಂಜೂರಾತಿ ನೀಡುವುದಾಗಿ ಕಳೆದ 3 ಅಧಿವೇಶನಗಳಲ್ಲಿ ಸರ್ಕಾರ ಭರವಸೆ ನೀಡಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಇದುವರೆವಿಗೂ ಸಂಚಾರಿ ಪೊಲೀಸ್ ಠಾಣೆಗೆ ಮಂಜೂರಾತಿ ನೀಡದಿರಲು ಕಾರಣಗಳೇನು?